

ಪಾತ್ರ, ಗೃಹಿಣಿಯ ಪಾತ್ರ... ಹೀಗೆ ಬೇರೆ ಬೇರೆ ಥರದ ಪಾತ್ರಗಳಲ್ಲಿ ನಟಿಸಿದ್ದೇನೆ. ಈಗ ಸಿನಿಮಾದಲ್ಲಿ ಅಂಥದ್ದೊಂದು ಪಾತ್ರವನ್ನು ಕೊಂಚ ರಿಸ್ಕ್ ತಗೊಂಡು ಮಾಡಿದರೆ ಮುಂದೆ ಅವಕಾಶ ಸಿಗತ್ತಾ ಎಂಬ ಯೋಚನೆಯಾಗಿಬಿಡುತ್ತದೆ. ಜನರು ಪ್ರಶ್ನೆಗಳನ್ನು ಕೇಳ್ತಾರೆ. ರಂಗಭೂಮಿಯಲ್ಲಿ ನನ್ನ ವಯಸ್ಸಿಗೆ ಈ ಪಾತ್ರ ಹೊಂದುತ್ತದಾ ಎಂದೆಲ್ಲ ಯೋಚಿಸುತ್ತಲೇ ಇರಲಿಲ್ಲ. ಅಲ್ಲಿ ನಮಗಿಂತ ಪಾತ್ರಗಳು ಮುಖ್ಯವಾಗಿದ್ದವು. ನಾಟಕ ಮುಖ್ಯವಾಗಿತ್ತು.

ನನಗೆ ಆಗ ದುಡ್ಡು ಮುಖ್ಯ ಅನಿಸುತ್ತಿರಲಿಲ್ಲ. ದುಡ್ಡೇ ಸಿಗುವುದಿಲ್ಲ ಅಂದರೂ ನಾನು ನಾಟಕಗಳಲ್ಲಿ ನಟಿಸುತ್ತಿದ್ದೆ. ನಟನೆ ಎಂದರೆ ಎಷ್ಟು ಪ್ರೀತಿ ಎಂದು ನನಗೆ ಅರಿವಾಗಿದ್ದೇ ಆವಾಗ.

◆ ಈಗ ಸಿನಿಮಾರಂಗದಲ್ಲಿದ್ದೀರಿ. ಹಲವು ಭಾಷೆಗಳಲ್ಲಿ ನಟಿಸುತ್ತಿದ್ದೀರಿ. ಸಾಕಷ್ಟು ಜನ ಅಭಿಮಾನಿಗಳಿದ್ದಾರೆ. ಪ್ರಸಿದ್ಧಿಯಿದೆ. ರಂಗಭೂಮಿ ದಿನಗಳಿಗೆ ಹೋಲಿಸಿದರೆ ಸಿನಿಮಾ ಜಗತ್ತಿನಿಂದ ನೀವು ಪಡೆದುಕೊಂಡಿದ್ದೇನು ಮತ್ತು ಗಳಿಸಿಕೊಂಡಿದ್ದೇನು?

ನಾನು ರಂಗಭೂಮಿಯಲ್ಲಿ ನಟಿಸುತ್ತಿದ್ದುದು ಪ್ಯಾಶನ್‌ಗಾಗಿ. ಆದರೆ ಸಿನಿಮಾ ಹಾಗಲ್ಲ. ಇದೊಂದು ಉದ್ಯಮ; ಹಣ ಮಾಡುವ ಉದ್ಯಮ. ಇಲ್ಲಿ ಯಾರೂ ಸೇವೆಗಾಗಿ ಪುಕ್ಕಟೆ ಕೆಲಸ ಮಾಡಲ್ಲ. ನನಗೆ ಗೊತ್ತು, ನನ್ನ ಮುಖಕ್ಕೆ ಇಲ್ಲೊಂದು ಬೆಲೆ ಇದೆ. ಹಾಗಾಗಿಯೇ ನನಗೆ ಅವಕಾಶಗಳು ಸಿಗುತ್ತವೆ. ಅದಕ್ಕೆ ನಾನು ನಿಗದಿತ ಸಂಭಾವನೆ ತೆಗೆದುಕೊಳ್ಳುತ್ತೇನೆ. ಆದರೆ ರಂಗಭೂಮಿ ದಿನಗಳಲ್ಲಿ ಎರಡು ಸಾವಿರ ರೂಪಾಯಿ ಸಂಭಾವನೆ ಪಡೆದಾಗ ಸಿಗುತ್ತಿದ್ದ ಮುಗ್ಧ ಸಂತೋಷ ಇತ್ತಲ್ಲ, ಆ ಮುಗ್ಧತೆಯನ್ನು ನಾನು ಕಳೆದುಕೊಂಡಿದ್ದೇನೆ ಅನಿಸುತ್ತದೆ. ಹೆಚ್ಚು ಪ್ರಾಕ್ಟಿಕಾಲಿಟಿ ಬಂದಿದೆ. ಆಗ ರಂಗಭೂಮಿ ನನ್ನ ಜೀವನೋಪಾಯದ ಮಾರ್ಗ ಆಗಿರಲಿಲ್ಲ. ಬೇರೆ ಕೆಲಸ ಇತ್ತು. ಈಗ ನಟನೆ ನನ್ನ ಜೀವನೋಪಾಯವೂ ಹೌದು. ಇದೇ ನನ್ನ ವೃತ್ತಿ. ರಂಗಭೂಮಿ ದಿನಗಳ ಮುಗ್ಧತೆಯನ್ನು ಕಳೆದುಕೊಂಡು ಪ್ರಾಕ್ಟಿಕಾಲಿಟಿಯನ್ನು ಪಡೆದುಕೊಂಡಿದ್ದೇನೆ.

ಫಾಲೋ ಮಾಡೋಕೆ ಟ್ವಿಟರ್‌ನಲ್ಲಿ, ಇನ್‌ಸ್ಟಾಗ್ರಾಂನಲ್ಲಿ ಬೇಕಾದಷ್ಟು ಜನ ಇದ್ದಾರೆ. ಆದರೆ ಅದರಲ್ಲಿ ಎಷ್ಟು ಜನ ನಿಜವಾಗಲೂ ನನ್ನ ಅಭಿಮಾನಿಗಳು ಗೊತ್ತಿಲ್ಲ. ನನ್ನ ಮುಖ ನೋಡಿದರೆ 'ಮ್ಯಾಮ್, ನಾನು ನಿಮ್ಮ ದೊಡ್ಡ ಅಭಿಮಾನಿ' ಎನ್ನುತ್ತಾರೆ. ನನ್ನ ಬದಲಿಗೆ ಇನ್ಯಾವುದಾದರೂ ನಟಿ ಸಿಕ್ಕರೆ ಅವರ ಬಳಿ ಹೋಗಿಯೂ ಅದನ್ನೇ ಹೇಳ್ತಾರೆ. ಅದು ನನಗೊಬ್ಬಳಿಗೆ ನಿಷ್ಠಳಾಗಿರುವ ಅಭಿಮಾನ ಏನಲ್ಲ. ಈ ವಾಸ್ತವ ಅರಿವಾದ ಕ್ಷಣವೇ 'ನಾನು ಸ್ಪೆಷಲ್ ಅಲ್ಲ' ಎನ್ನುವುದು ಗೊತ್ತಾಗಿಬಿಡುತ್ತದೆ. ಎಷ್ಟು ಅಭಿಮಾನಿಗಳಿದ್ದಾರೋ ಅಷ್ಟೇ ಸೆಲೆಬ್ರಿಟಿಗಳೂ ಇದ್ದಾರೆ. ಅವರಲ್ಲಿ ನಾನೂ ಒಬ್ಬಳು ಎನ್ನುವುದು ಗೊತ್ತಾದರೆ ಈ ಪ್ರಸಿದ್ಧಿ ತಲೆಗೆ ಹತ್ತುವುದಿಲ್ಲ. ಹಾಗಾಗಿಯೇ ಎಷ್ಟೇ ಜನಪ್ರಿಯತೆ ಬಂದರೂ, ಶ್ರೀಮಂತಿಕೆ ಬಂದರೂ 'ನಾನು ಬರೀ ಶ್ರದ್ಧಾ. ನಮ್ಮ ಅಪ್ಪ ಅಮ್ಮನ ಮಗಳು. ಸಾಮಾನ್ಯಳಲ್ಲಿ ಸಾಮಾನ್ಯಳು' ಎಂದೇ ಅನಿಸುತ್ತಿರುತ್ತದೆ.

◆ ಶ್ರದ್ಧಾ ಸಖತ್ ಬೋಲ್ಡ್ ಹುಡುಗಿ ಅನ್ನುವ ಮಾತು ಚಿತ್ರರಂಗದಲ್ಲಿದೆ. ಹೆಣ್ಣುಮಕ್ಕಳು ಕೊಂಚ ನೇರವಾಗಿ ಮಾತನಾಡಿದರೆ, ದಿಟ್ಟವಾಗಿ ಕಂಡರೆ 'ಬೋಲ್ಡ್' ಎಂಬ ಹಣೆಪಟ್ಟಿ ಹಚ್ಚುವುದು; ಅದು ಹೆಣ್ಣಿಗೆ ಸಹಜ ಸ್ವಭಾವ ಅಲ್ಲ ಎನ್ನುವಂತೆ ನೋಡುವುದರ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಹಹ್ಹಹ್ಹಾ... ನಂಗೆ ತುಂಬ ಫನ್ನಿ ಅನಿಸುತ್ತದೆ.

ನಮ್ಮ ದೃಷ್ಟಿಕೋನಗಳೇ ಎಷ್ಟು ಸಿಲ್ಲಿಯಾಗಿವೆ ಎಂದರೆ, ಹುಡುಗಿ ಸ್ವಲ್ಪ ಜಾಸ್ತಿ ಮಾತಾಡಿದರೆ ಬೋಲ್ಡ್; ಮಾತಾಡಿಲ್ಲ ಅಂದ್ರೆ ಕ್ಯೂಟ್, ಬಬ್ಲಿ, ಗರ್ಲ್ ನೆಕ್ಸ್ಟ್ ಡೋರ್! ಅಂದ್ರೆ ನಾವು ಹುಡುಗಿಯರನ್ನು ಈ ಚೌಕಟ್ಟಿನಲ್ಲಿ ಹಾಕಿಟ್ಟುಬಿಡುತ್ತೇವೆ. ಸ್ವಲ್ಪ ರಿಸ್ಕ್ ಇರುವ ಪಾತ್ರ ಮಾಡ್ತಾಳೆ ಅಂದ್ರೆ ಬೋಲ್ಡ್, ಸ್ವಲ್ಪ ದೇಹಪ್ರದರ್ಶನ ಮಾಡ್ತಾಳೆ ಅಂದ್ರೆ ಗ್ಲ್ಯಾಮರಸ್.

ಬೋಲ್ಡ್ ಎನ್ನುವುದು ದೇಹಕ್ಕಿಂತಲೂ, ವರ್ತನೆ, ಸ್ಟೈಲ್, ವ್ಯಕ್ತಿತ್ವಕ್ಕೆ ಸಂಬಂಧಪಟ್ಟಿದ್ದು. ನನಗನಿಸುವ ಪ್ರಕಾರ ಇಂದು ಬಹುತೇಕ ಅಲ್ಲ, ಎಲ್ಲ ಹುಡುಗಿಯರೂ ಬೋಲ್ಡ್ ಆಗಿದ್ದಾರೆ; ಅಂದರೆ ಅವರಿಗೆ ಅವರದ್ದೇ ಧ್ವನಿ ಇದೆ. ಸ್ವತಂತ್ರ ವ್ಯಕ್ತಿತ್ವ ಇದೆ. ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಕ್ಷಮತೆ ಇದೆ. ಸುಶಿಕ್ಷಿತರಾಗಿದ್ದೀವಿ. ಸ್ಕೂಲಿಗೆ ಹೋಗುತ್ತಿರುವವರು, ಕಾಲೇಜಿಗೆ ಹೋಗುತ್ತಿರುವವರು, ಕೆಲಸಕ್ಕೆ ಹೋಗುತ್ತಿರುವವರು, ಮನೆಯನ್ನು ನೋಡಿಕೊಳ್ಳುತ್ತಿರುವವರು ಎಲ್ಲರೂ ಬೋಲ್ಡ್ ಹೆಣ್ಣುಮಕ್ಕಳೇ. ಎಲ್ಲೋ ಒಂದಿಷ್ಟು ಜನ ಸುಮ್ಮನಿದ್ದಾರೆ ಎಂದರೆ ಅವರು ನಾಚಿಕೊಂಡಿದ್ದಾರೆ ಎಂದಲ್ಲ. ಸಮಯ ಬಂದಾಗ ಅವಳೂ ಬೋಲ್ಡ್ ಆಗಿಯೇ ಆಗುತ್ತಾಳೆ. ಮಾತನಾಡುತ್ತಾಳೆ.

ನಾನು ಮಾತ್ರವಲ್ಲ, ಚಿತ್ರರಂಗದಲ್ಲಿ ನನ್ನ ಹಾಗೆಯೇ ಸಾಕಷ್ಟು ಬೋಲ್ಡ್ ಹುಡುಗಿಯರು ಇದ್ದಾರೆ. ನನಗೆ ಅದೊಂದು ಕಾಂಪ್ಲಿಮೆಂಟ್!

◆ ಚಿತ್ರರಂಗದಲ್ಲಿ ಗ್ಲ್ಯಾಮರಸ್ ಅನ್ನುವುದು ಬರೀ ದೇಹಕ್ಕೆ ಸಂಬಂಧಿಸಿದ್ದು ಎಂಬ ನಂಬಿಕೆಯೇ ಇದೆ. ನಿಮ್ಮ ದೃಷ್ಟಿಯಲ್ಲಿ ಗ್ಲ್ಯಾಮರ್ ಅಂದರೆ ಏನು?

ನಿಜ. ಚಿತ್ರರಂಗದ ದೃಷ್ಟಿಯಲ್ಲಿ ದೇಹಪ್ರದರ್ಶನವೇ ಗ್ಲ್ಯಾಮರ್. ಅವರ ಪ್ರಕಾರ ನಾನು ಸೀರೆ ಉಟ್ಟುಕೊಂಡರೆ ಗ್ಲ್ಯಾಮರಸ್ ಅಲ್ಲ. ಗ್ಲ್ಯಾಮರಸ್ ಎಂಬ ಶಬ್ದದ ಅರ್ಥ ಏನು ಎಂದು ಗೊತ್ತಿಲ್ಲದೆಯೇ ನಾವು ಆ ಶಬ್ದವನ್ನು ಬಳಸುತ್ತಿರುತ್ತೇವೆ. ಗ್ಲ್ಯಾಮರಸ್ ಎಂಬ ಶಬ್ದಕ್ಕೂ ವ್ಯಕ್ತಿತ್ವಕ್ಕೂ ಸಂಬಂಧವೇ ಇಲ್ಲ ಎನ್ನುವ ಹಾಗೆ ಆ ಶಬ್ದವನ್ನು ಬಳಸುತ್ತಿದ್ದೇವೆ.

ನನ್ನ ಪ್ರಕಾರ ಗ್ಲ್ಯಾಮರ್ ಎನ್ನುವುದು ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದು. ಸರಳವಾದ ಕಾಟನ್ ಸೀರೆ ಉಟ್ಟುಕೊಂಡು, ಕಣ್ಣಿಗೆ ಕಾಜಲ್ ಹಚ್ಚಿಕೊಂಡು, ಕೂದಲನ್ನು ಕಟ್ಟಿಕೊಂಡರೆ ಅದು ಗ್ಲ್ಯಾಮರಸ್ ಆಗಿಯೇ ಇರುತ್ತದೆ. ನಾನೊಂದು ಸ್ಥಳವನ್ನು ಪ್ರವೇಶಿಸಿದಾಗ ಜನರೆಲ್ಲ ನನ್ನನ್ನು ನೋಡುತ್ತಾರೆ ಎಂಬ ವಿಶ್ವಾಸವೇ ಗ್ಲ್ಯಾಮರ್. ದೇಹಪ್ರದರ್ಶನ ಮಾಡಿ ಗಮನಸೆಳೆಯುವುದು ದೊಡ್ಡ ಮಾತೇ ಅಲ್ಲ. ಆದರೆ ಅದನ್ನು ಬಿಟ್ಟು ವ್ಯಕ್ತಿತ್ವದಿಂದ ಗಮನ ಸೆಳೆಯುವುದಿದೆಯಲ್ಲ, ಅದು ನನ್ನ ಪಾಲಿನ ನಿಜವಾದ ಗ್ಲ್ಯಾಮರ್.

ಹಾಗಂತ ನಾನು ಎಕ್ಸ್‌ಪೋಸ್ ಮಾಡುವುದನ್ನು ವಿರೋಧಿಸುವುದಿಲ್ಲ. ನಿಮಗೆ ಕಂಫರ್ಟ್ ಅನಿಸಿದರೆ ಎಕ್ಸ್‌ಪೋಸ್ ಅನ್ನುವುದು ಸರಿಯೇ. ಜನ ಹೇಳ್ತಾರೆ ಅಂತ ನಾವು ನಮ್ಮ ಉಡುಗೆ ತೊಡುಗೆಯನ್ನು ಬದಲಾಯಿಸಿಕೊಳ್ಳಬೇಕಿಲ್ಲ. ನಿಮಗೆ ಶಾರ್ಟ್ ಡ್ರೆಸ್ ಹಾಕಿಕೊಳ್ಳಬೇಕು ಎಂದು ಅನಿಸಿದರೆ ಧರಿಸಿ ಅಷ್ಟೆ. ಯಾರಿಗೂ ನಿಮ್ಮನ್ನು ತಡೆಯುವ ಅಧಿಕಾರ ಇಲ್ಲ. ನನ್ನ ಪೋಷಕರು ನನ್ನನ್ನು ಯಾವತ್ತೂ ಈ ವಿಷಯದಲ್ಲಿ ನಿರ್ಬಂಧಿಸಿಲ್ಲ. ನಾನೂ ಯಾರನ್ನೂ ನಿರ್ಬಂಧಿಸಿಲ್ಲ. ಹೆಣ್ಣು ತೊಡುವ ಬಟ್ಟೆಗಳಿಂದ ಅವಳ ಮೇಲೆ ಅತ್ಯಾಚಾರಗಳಾಗುತ್ತವೆ ಎನ್ನುವುದೆಲ್ಲ ದೊಡ್ಡ ಮಿಥ್ ಅಷ್ಟೆ.

◆ ಇಂದಿನ ಹೆಣ್ಣಿಗೆ ಎರಡು ರೀತಿಯ ದ್ವಂದ್ವಗಳಿವೆ. ಒಂದು ಸಾಂಪ್ರದಾಯಿಕ ಹೇರಿಕೆಗಳನ್ನು ನಿರಾಕರಿಸುವುದು; ಅದೇ ಸಮಯದಲ್ಲಿ ತಮ್ಮ ನಿಜವಾದ ಸಂತೋಷ, ತೃಪ್ತಿ ಯಾವುದರಲ್ಲಿದೆ ಎಂದು ಕಂಡುಕೊಳ್ಳುವುದು. ಈ ಸವಾಲನ್ನು ಹೇಗೆ ನಿಭಾಯಿಸಿಕೊಳ್ಳಬಹುದು?

ಆ ಥರದ ನಿರ್ಬಂಧಗಳು ಮನೆಯಿಂದಲೇ ಬಂದರೆ ಒಂದು ವಯಸ್ಸಿನವರೆಗೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಯಾಕೆಂದರೆ ಅವರು